# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1398 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 22.08.2025 |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಪ್ರಸ್ತುತ ಬಡಾವಣೆ ಅನುಮೋದನೆ, ಕಟ್ಟಡ ನಿರ್ಮಾಣ, ನಮೂನೆ 9/11 ವಿಷಯಗಳಿಗೆ ಸಂಬಂಧಿಸಿದಂತೆ ನಿಯಮಗಳು ಸಂಕೀರ್ಣವಾಗಿದ್ದು ಸಾವಿರಾರು ಅರ್ಜಿಗಳು ಬಾಕಿಯಾಗಿರುವುದನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಸರಕಾರ ಯಾವ ರೀತಿಯ ಕ್ರಮಕೈಗೊಂಡಿದೆ | ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ:<br>• ಪ್ರಸ್ತುತ ಬಡಾವಣೆ ಅನುಮೋದನೆ ಸಂಬಂಧಿಸಿದಂತೆ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961 ರ ಉಪಬಂದಗಳನ್ನು ಅನುಸರಿಸಲಾಗುತ್ತಿರುತ್ತದೆ.<br>• ಕಟ್ಟಡಗಳ ನಿರ್ಮಾಣಗಳಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಗಳು ಕರ್ನಾಟಕ ಪಂಚಾಯತ್ ರಾಜ್ (ಕಟ್ಟಡಗಳ ನಿರ್ಮಾಣದ ಮೇಲೆ ಗ್ರಾಮ ಪಂಚಾಯತ್‌ಗಳ, ತಾಲ್ಲೂಕು ಪಂಚಾಯತ್‌ಗಳ ಮತ್ತು ಜಿಲ್ಲಾ ಪಂಚಾಯತ್‌ಗಳ ನಿಯಂತ್ರಣ) ಮಾದರಿ ಉಪವಿಧಿಗಳು, 2015 ಅನ್ನು ಅನುಸರಿಸಲಾಗುತ್ತಿರುತ್ತದೆ.<br>• Karnataka Town and Country Planning (Development of Land in areas other than Local Planning Areas) Regulations, 2025 ಪ್ರಕಾರ ಕಟ್ಟಡ ನಿರ್ಮಾಣಕ್ಕೆ ಅನುಮೋದನೆ ನೀಡುವ ಸಂಬಂಧ ನಿಯಮ 26(5) ರಂತೆ ಜಾರಿಗೆ ತಂದ ಒಂದು ವರ್ಷದಲ್ಲಿ ಕಟ್ಟಡ ನಕ್ಷೆ ಅನುಮೋದನೆಗಳನ್ನು ಆನ್ ಲೈನ್ ತಂತ್ರಾಂಶದ ಮುಖಾಂತರ ನೀಡಲು ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ನಿಗಧಿಪಡಿಸಲಾಗಿರುತ್ತದೆ.<br>• ನಮೂನೆ 9/11 ರ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ತೆರಿಗೆ, ದರ ಮತ್ತು ಫೀಜುಗಳು) ನಿಯಮಗಳು, 2025 ರ ಕರಡು ನಿಯಮಗಳನ್ನು ಅಧಿಸೂಚಿಸಲಾಗಿರುತ್ತದೆ ಈ ನಿಯಮಗಳು, ಅಂತಿಮಗೊಂಡ ನಂತರ ಇ-ಸ್ವತ್ತು ತಂತ್ರಾಂಶದಲ್ಲಿ ನಮೂನೆಗಳ ವಿತರಣೆಗೆ ಅಭಿಯಾನವನ್ನು ಹಮ್ಮಿಕೊಳ್ಳಲು ಉದ್ದೇಶಿಸಲಾಗಿರುತ್ತದೆ. |
| (ಆ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಈ ಮೊದಲು ನಿವೇಶನ ಅನುಮೋದನೆಗೆ ಕೆಲವು ರಿಯಾಯಿತಿ ನೀಡಿದ್ದು, ರಾಜ್ಯಕ್ಕೆ ಏಕರೂಪದ ಕಾನೂನು ಅನ್ವಯಿಸುವಾಗ ಸಮಸ್ಯೆ ಆಗಿರುವುದನ್ನು ಪರಿಹರಿಸಲು ಸರಕಾರದ ಕ್ರಮಗಳೇನು ನಮೂನೆ 11 ಬಿಯನ್ನು ರದ್ದುಪಡಿಸಲು ಕಾರಣವೇನು. | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಕಾಯ್ದೆ, 2025 ನ್ನು ದಿನಾಂಕ:07-04-2025 ರಂದು ಅಧಿಸೂಚಿಸಲಾಗಿದ್ದು, ಅದರನ್ವಯ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ತೆರಿಗೆ, ದರ ಮತ್ತು ಫೀಜುಗಳು) ನಿಯಮಗಳು, 2025 ರ ಕರಡು ನಿಯಮಗಳು ಪರಿಶೀಲನೆಯಲ್ಲಿದ್ದು, ತಕ್ಷಣ ನಿಯಮಗಳನ್ನು ಅಂತಿಮಗೊಳಿಸಲಾಗುತ್ತಿದೆ. ಅಂತಿಮಗೊಳಿಸಿದ ನಂತರ ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆ 11ಬಿ ವಿತರಿಸಲು ಕ್ರಮ ಕೈಗೊಳ್ಳಲಾಗುವುದು |

| | | |
|---|---|---|
| (ಇ) | ನಿವೇಶನ ಅನುಮೋದನೆ ಮತ್ತು ಕಟ್ಟಡ ಪರವಾನಿಗೆ ನೀಡುವುದು ಪ್ರಸ್ತುತ ಒಂದು ಬಹು ಇಲಾಖೆಗಳ ಕಾರ್ಯವ್ಯಾಪ್ತಿಯಲ್ಲಿ ಇರುವುದರಿಂದ ಸದರಿ ಪ್ರಕ್ರಿಯೆಗಳನ್ನು ಸರಳೀಕೃತಗೊಳಿಸಲು ಕಂದಾಯ, ಸ್ಥಳೀಯ ಯೋಜನಾ ಪ್ರಾಧಿಕಾರ, ಲೋಕೋಪಯೋಗಿ, ಇತ್ಯಾದಿ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಸಾರ್ವಜನಿಕರಿಗೆ ಯಾವಾಗ ಅನುಕೂಲ ಮಾಡಲು ಕ್ರಮವಹಿಸಲಾಗುತ್ತಿದೆ: | ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡುವ ಗ್ರಾಮೀಣ ಪ್ರದೇಶಗಳಲ್ಲಿ ವಿನ್ಯಾಸ ಅನುಮೋದನೆಗಳನ್ನು ಏಕಗವಾಕ್ಷಿ ವ್ಯವಸ್ಥೆ ಮೂಲಕ ನೀಡಲು ತಂತ್ರಾಂಶವನ್ನು ತಯಾರಿಸಲಾಗುತ್ತಿದೆ |
| (ಈ) | ಕಟ್ಟಡ ನಿರ್ಮಿಸಿದ ನಂತರ ಕಟ್ಟಡದ ಮೌಲ್ಯ ಮಾಪನ ಮಾಡಿ ಕಾರ್ಮಿಕ ನಿಧಿಗೆ ಕಟ್ಟಿದ ಮೊತ್ತವನ್ನು ಪರಿಶೀಲಿಸಿ ಮತ್ತು ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆಯೊಂದಿಗೆ ಜಂಟಿಯಾಗಿ ಪರಿಶೀಲಿಸಿ ಕಟ್ಟಡ ಸಂಖ್ಯೆ ನೀಡಲು ಹಾಗೂ ಸ್ವಾಧೀನತಾ ಪ್ರಮಾಣಪತ್ರ ನೀಡುವಲ್ಲಿ ತಡವಾಗುತ್ತಿದ್ದು, ಸಮಸ್ಯೆ ಪರಿಹರಿಸಲು ಸರಕಾರವು ಯಾವ ರೀತಿಯಲ್ಲಿ ಕ್ರಮವಹಿಸಲಾಗುವುದು: | ಸರ್ಕಾರದ ಅಧಿಸೂಚನೆ ಸಂಖ್ಯೆ:RDPR 26 GPA 2025, ದಿನಾಂಕ:03.06.2025 ರಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಕಟ್ಟಡಗಳ ನಿರ್ಮಾಣದ ಮೇಲೆ ಜಿಲ್ಲಾ ಪಂಚಾಯಿತಿಗಳ, ತಾಲ್ಲೂಕು ಪಂಚಾಯಿತಿಗಳ ಮತ್ತು ಗ್ರಾಮ ಪಂಚಾಯಿತಿಗಳ ನಿಯಂತ್ರಣ) (ತಿದ್ದುಪಡಿ) ಮಾದರಿ ಉಪವಿಧಿಗಳು, 2025ನ್ನು ಅಧಿಸೂಚಿಸಲಾಗಿದ್ದು, ಅದರನ್ವಯ ಕಟ್ಟಡ ನಿರ್ಮಾಣ ಪೂರ್ಣಗೊಂಡ ನಂತರ ವಾಸಯೋಗ್ಯ ಪ್ರಮಾಣ/ಸ್ವಾಧೀನ ಪ್ರಮಾಣ ಪತ್ರ (Occupancy Certificate) ನೀಡುವ ಬಗ್ಗೆ ಕ್ರಮ ವಹಿಸಲಾಗುತ್ತಿದೆ.<br><br>ನಿಯಮಾನುಸಾರ ದಾಖಲೆಗಳನ್ನು ಸಲ್ಲಿಸಿದಲ್ಲಿ ಸ್ವಾಧೀನ ಪ್ರಮಾಣ ಪತ್ರವನ್ನು ನೀಡಲಾಗುತ್ತಿದೆ. |
| (ಉ) | ಗ್ರಾಮೀಣ ಪ್ರದೇಶಗಳಲ್ಲಿ ಪ್ರಸ್ತುತ ಬಡಾವಣೆ ಅನುಮೋದನೆ, ಕಟ್ಟಡ ನಿರ್ಮಾಣ ವಿಷಯಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಏಕಗವಾಕ್ಷಿ ವ್ಯವಸ್ಥೆ ಹಾಗೂ ಎಸ್. ಒ. ಪಿ. ರೂಪಿಸುವ ಬಗ್ಗೆ ಸರಕಾರದ ನಿಲುವೇನು? | ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡುವ ಗ್ರಾಮೀಣ ಪ್ರದೇಶಗಳಲ್ಲಿ ವಿನ್ಯಾಸ ಅನುಮೋದನೆಗಳನ್ನು ಏಕಗವಾಕ್ಷಿ ವ್ಯವಸ್ಥೆ ಮೂಲಕ ನೀಡಲು ತಂತ್ರಾಂಶವನ್ನು ತಯಾರಿಸಲಾಗುತ್ತಿದೆ.<br><br>ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡದ ಇರುವ ಗ್ರಾಮೀಣ ಪ್ರದೇಶಗಳಲ್ಲಿಯೂ ಸಹ ತಂತ್ರಾಂಶದ ಮುಖಾಂತರ ಅನುಮೋದನೆ ನೀಡುವ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಪರಿಶೀಲಿಸಲಾಗುವುದು. |

**ಸಂಖ್ಯೆ:** ಗ್ರಾಅಪ 635 ಗ್ರಾಪಂಅ 2025

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ-೪ಎ<br>Part – IVA | ಬೆಂಗಳೂರು, ಮಂಗಳವಾರ, ೦೩, ಜೂನ್, ೨೦೨೫(ಜ್ಯೇಷ್ಠ, ೧೩, ಶಕವರ್ಷ, ೧೯೪೭)<br>BENGALURU, TUESDAY, 03, JUNE, 2025(JYAISTHA 13, SHAKAVARSHA 1947) | ಸಂ. ೩೩೫<br>No. 335 |
|---|---|---|


## Government of Karnataka

No.RDP 26 GPA 2025

Karnataka Government Secretariat,
Vidhana Soudha,
Bengaluru, dated:03-06-2025.

## NOTIFICATION

Whereas the draft of the Karnataka Grama Swaraj And Panchayath Raj (Zilla Panchayaths, Taluka Panchayaths and Grama Panchayaths control over Erection of Buildings) (Amendment) Model Bye-Laws 2025, Which the Government of Karnataka proposes to make, in exercise of the powers conferred by section 316 read with the sections 315 and 64 of Karnataka Grama Swaraj and Panchayath Raj Act, 1993 (Karnataka 14 of 1993) was published dated:08-04-2025, inviting as objections and suggestions from all persons likely to be affected thereby with in thirty days from the date of its publication in the Karnataka Gazette.

And whereas, the said Gazette was made available to the public on 08-04-2025;

And whereas, the objections and suggestions received in respect of the said draft have been considered by the State Government;

Now, therefore, in exercise of the powers conferred by Section 316 of the Karnataka Grama Swaraj and Panchayath Raj Act 1993,(Karnataka 14 of 1993) the Government of Karnataka here by makes the following Bye-laws, namely:-

**BYE-LAWS**

1. **Title and Commencement**: (1) These Bye-Laws shall be called the Karnataka Grama Swaraj and Panchayath Raj (Zilla Panchayaths, Taluka Panchayaths and Grama Panchayaths control over Erection of Buildings)(Amendment) Model Bye-Laws, 2025.

   (2) They shall come into force from the date of their publication in the official Gazette.

2. **Amendment of clause 4.-** In the Bye-Law, after the 4(d) (xiv) of Karnataka Grama Swaraj and Panchayath Raj (Zilla Panchayaths, Taluka Panchayaths and Grama Panchayaths control over Erection of Buildings) Model Bye-Law 2015 (here in after referred to as the said Bye-Laws) in clause 4, in sub section (d) after item (xiv), the following shall be inserted, namely:-

   "(xv) Mandatory registration with Real Estate Regulatory Authority (RERA) shall be imposed in the letter of approval of the building plan in the converted lands."

2. **Amendment of Clause 12.- in the said B**ye-Laws, after clause 12, the following proviso shall be inserted, namely:-

   "Provided that, the completion letter from the Local Planning Authority with regard to the construction of the building, in accordance with the approved plan and rules shall be submitted to the competent authority."

3. **Amendment of clause 13.- in the said Bye-Laws,** after clause 13, the following proviso shall be inserted, namely:-

"Provided that, after getting the completion certificate from the qualified Architect who are supervisor with regard to the completion of the building work. The Panchayat Development Officer along with the technical officer of the Local Planning Authority have to visit the construction site and to inspect the construction and to confirm the construction is in accordance with the approved building plan and also the project is approved by the RERA and to certify the same with joint signature."

By Order and in the
Name of Governor of Karnataka.

**(Dr|| N. Nomesh Kumar)**
Director (Panchayat Raj) and Ex-Officio
Deputy Secretary to Government
Rural Development & Panchayath Raj
Department.

**ಕರ್ನಾಟಕ ಸರ್ಕಾರ**

ಸಂಖ್ಯೆ: RDPR/ 26 /GPA/2025

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು ದಿನಾಂಕ:03-06-2025.

**ಅಧಿಸೂಚನೆ**

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14)ರ ಪ್ರಕರಣಗಳಾದ 315 ಮತ್ತು 64 ರೊಂದಿಗೆ ಓದಿಕೊಂಡಂತೆ ಪ್ರಕರಣ 316 ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಕೆಳಕಂಡ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಕಟ್ಟಡಗಳ ನಿರ್ಮಾಣದ ಮೇಲೆ ಜಿಲ್ಲಾ ಪಂಚಾಯತ್‌ಗಳ, ತಾಲ್ಲೂಕು ಪಂಚಾಯತ್‌ಗಳ ಮತ್ತು ಗ್ರಾಮ ಪಂಚಾಯತ್‌ಗಳ ನಿಯಂತ್ರಣ) (ತಿದ್ದುಪಡಿ) ಮಾದರಿ ಉಪವಿಧಿಗಳು, 2025 ರ ಕರಡನ್ನು ದಿನಾಂಕ:08-04-2025 ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿ ಅದರಿಂದ ಬಾಧಿತರಾಗುವ ವ್ಯಕ್ತಿಗಳಿಂದ ಸದರಿ ಕರಡಿಗೆ ಆಕ್ಷೇಪಣೆ ಮತ್ತು ಸಲಹೆಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಸಲ್ಲಿಸಬೇಕೆಂದು ಕೋರಿರುವುದರಿಂದ:

ಮತ್ತು ಸದರಿ ರಾಜ್ಯ ಪತ್ರವು ಸಾರ್ವಜನಿಕರಿಗೆ ದಿನಾಂಕ:08-04-2025 ರಂದು ಲಭ್ಯವಾಗುವಂತೆ ಮಾಡಿರುವುದರಿಂದ,

ಮತ್ತು ಸದರಿ ಕರಡಿನ ಸಂಬಂಧದಲ್ಲಿ ರಾಜ್ಯ ಸರ್ಕಾರಕ್ಕೆ ಸ್ವೀಕೃತವಾದ ಆಕ್ಷೇಪಣೆ ಅಥವಾ ಸಲಹೆಗಳನ್ನು ಪರಿಗಣಿಸಿರುವುದರಿಂದ,

ಈಗ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ರ ಪ್ರಕರಣ 316 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಉಪವಿಧಿಗಳನ್ನು ರಚಿಸುತ್ತದೆ, ಎಂದರೆ;-

**ಉಪವಿಧಿಗಳು**

1. **ಹೆಸರು ಮತ್ತು ಪ್ರಾರಂಭ.-** (1)ಈ ಉಪ ವಿಧಿಗಳನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಕಟ್ಟಡಗಳ ನಿರ್ಮಾಣದ ಮೇಲೆ ಜಿಲ್ಲಾ ಪಂಚಾಯತಿಗಳ, ತಾಲ್ಲೂಕು ಪಂಚಾಯತಿಗಳ ಮತ್ತು ಗ್ರಾಮ ಪಂಚಾಯತ್‌ಗಳ ನಿಯಂತ್ರಣ) (ತಿದ್ದುಪಡಿ) ಮಾದರಿ ಉಪ ವಿಧಿಗಳು, 2025 ಎಂದು ಕರೆಯತಕ್ಕದ್ದು.

(2) ಇವು ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ.

2. **4ನೇ ಉಪವಿಧಿ ತಿದ್ದುಪಡಿ.-** ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಕಟ್ಟಡಗಳ ನಿರ್ಮಾಣದ ಮೇಲೆ ಜಿಲ್ಲಾ ಪಂಚಾಯತಿಗಳ, ತಾಲ್ಲೂಕು ಪಂಚಾಯತಿಗಳ ಮತ್ತು ಗ್ರಾಮ ಪಂಚಾಯತ್‌ಗಳ ನಿಯಂತ್ರಣ) (ತಿದ್ದುಪಡಿ) ಮಾದರಿ ಉಪವಿಧಿಗಳು, 2025 (ಇನ್ನೂ ಮುಂದೆ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



ಸದರಿ ಉಪವಿಧಿಗಳೆಂದು ಉಲ್ಲೇಖಿಸಲಾಗಿದೆ. ಉಪವಿಧಿ 4(ಡಿ) (xiv)ನಂತರ ಈ ಕೆಳಕಂಡಂತೆ ನಮೂದಿಸತಕ್ಕದ್ದು.

"(xv) ಭೂ ಪರಿವರ್ತಿತ ಜಮೀನುಗಳಲ್ಲಿ ಕಟ್ಟಡ ನಕ್ಷೆಗೆ ಅನುಮೋದನೆ ನೀಡುವ ಅನುಮೋದನಾ ಪತ್ರದಲ್ಲಿ ಕಡ್ಡಾಯವಾಗಿ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರಿ (ರೇರಾ) ದಲ್ಲಿ ನೋಂದಣಿ ಮಾಡಿಸುವಂತೆ ಷರತ್ತನ್ನು ವಿಧಿಸತಕ್ಕದ್ದು."

**3. 12ನೇ ಉಪವಿಧಿ ತಿದ್ದುಪಡಿ.-** 12ನೇ ಉಪವಿಧಿಯ ನಂತರ ಈ ಕೆಳಕಂಡ ಪರಂತುವನ್ನು ನಮೂದಿಸತಕ್ಕದ್ದು.

ಪರಂತು, ಕಟ್ಟಡದ ನಿರ್ಮಾಣವು ಪೂರ್ಣಗೊಂಡಿರುವ ಬಗ್ಗೆ "ಸ್ಥಳೀಯ ಯೋಜನಾ ಪ್ರಾಧಿಕಾರದಿಂದ ಕಟ್ಟಡದ ನಿರ್ಮಾಣ ಅನುಮೋದಿತ ನಕಾಶೆ ಹಾಗೂ ನಿಯಮಗಳನುಸಾರ ಪೂರ್ಣಗೊಂಡಿರುವ ಬಗ್ಗೆ ಸ್ಥಳೀಯ ಯೋಜನಾ ಪ್ರಾಧಿಕಾರದಿಂದ ದೃಢೀಕರಣ ಪತ್ರವನ್ನು ಪಡೆದು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

4. **13ನೇ ಉಪವಿಧಿ ತಿದ್ದುಪಡಿ.-** 13ನೇ ಉಪವಿಧಿಯ ನಂತರ ಈ ಕೆಳಕಂಡ ಪರಂತುವನ್ನು ನಮೂದಿಸತಕ್ಕದ್ದು.

ಪರಂತು, ಕಾಮಗಾರಿಯು ಪೂರ್ಣಗೊಂಡ ನಂತರ ಅರ್ಹನಾದ ವಾಸ್ತುಶಿಲ್ಪಿ, ಕಟ್ಟಡದ ನಿರ್ಮಾಣದ ಮೇಲ್ವಿಚಾರಣೆ ನಡೆಸಿದ ಅರ್ಹ ಇಂಜಿನಿಯರ್ ಅಥವಾ ಮೇಲ್ವಿಚಾರಕರಿಂದ ಕಟ್ಟಡ ಪೂರ್ಣಗೊಂಡಿರುವ ಪತ್ರವನ್ನು ಪಡೆದ ನಂತರ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಸ್ಥಳೀಯ ಯೋಜನಾ ಪ್ರಾಧಿಕಾರದ ತಾಂತ್ರಿಕ ಅಧಿಕಾರಿಗಳೊಡನೆ ಜಂಟಿಯಾಗಿ ಪರಿಶೀಲಿಸಿ, ಕಟ್ಟಡವು ಕಟ್ಟಡದ ನಕಾಶೆಗನುಗುಣವಾಗಿ ನಿರ್ಮಿತವಾಗಿರುವ ಬಗ್ಗೆ ಮತ್ತು ಕಟ್ಟಡದ ನಿರ್ಮಾಣದ ಯೋಜನೆಗೆ ರೇರಾ ನೋಂದಣಿಯಾಗಿರುವ ಬಗ್ಗೆ ಪರಿಶೀಲನೆ ಮಾಡಿದ ನಂತರ ಸಂಬಂಧಪಟ್ಟ ತಾಂತ್ರಿಕ ಅಧಿಕಾರಿ ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಜಂಟಿಯಾಗಿ ಸಹಿ ಪಡೆದ ದಾಖಲೆಯನ್ನು ಪಡೆದುಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಡಾ|| ಎನ್. ಸೋಮಶ್ಕುಮಾರ್)
ನಿರ್ದೇಶಕರು (ಪಂ ರಾಜ್) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

[illegible]